ಯುವಕ– ಯುವತಿಯರ ಶರ್ಟ್‌ಗೆ ಮಾತ್ರವಲ್ಲ, ಜಂಪ್‌ಸೂಟ್, ಸ್ಕರ್ಟ್, ಮಕ್ಕಳ ಫ್ರಾಕ್ ಆಗಿಯೂ ವಾರ್ಡ್‌ರೋಬಿನಲ್ಲಿ ಸ್ಥಾನ ಪಡೆದಿದೆ. ಡೆನಿಮ್ ಉಡುಪಿಗೆ ಕ್ಯಾಶುವಲ್ ಎಂಬ ಹಣೆಪಟ್ಟಿಯಿದ್ದರೆ, ಈ ಚೆಂಬ್ರೆ ಉಡುಗೆಗಳನ್ನು ಫಾರ್ಮಲ್ ಆಗಿಯೂ ಬಳಸಬಹುದು ಎಂದು ಹೆಚ್ಚುವರಿ ಅಂಕ ನೀಡಲಾಗಿದೆ. ಬ್ಯುಸಿನೆಸ್ ಮೀಟಿಂಗ್‌ನಲ್ಲಿ ಬ್ಲೇಜರ್ ಒಳಗಡೆ ಈ ಆರಾಮದಾಯಕ ತಿಳಿ ಬಣ್ಣದ ಚೆಂಬ್ರೆ ಷರ್ಟ್ ಧರಿಸಬಹುದು. ಈ ವಸ್ತ್ರಕ್ಕೆ ದೃಷ್ಟಿಬೊಟ್ಟಿನಂತೆ ಅಲ್ಲಲ್ಲಿ ಸಣ್ಣಪುಟ್ಟ ನೆರಿಗೆಗಳಿದ್ದರೂ ಒಟ್ಟಾರೆ ಗರಿಗರಿಯಾಗೇ ಕಾಣುತ್ತದೆ.

ವಸ್ತ್ರ ವಿನ್ಯಾಸಕಾರರು ಈ ಬಹುರೂಪಿ ಚೆಂಬ್ರೆಯನ್ನು ಸರಿಯಾಗೇ ದುಡಿಸಿಕೊಳ್ಳುತ್ತಿದ್ದಾರೆ. ಕಸೂತಿಯನ್ನು ಡೆನಿಮ್‌ನಲ್ಲಿ ಮಾಡುವುದು ಸ್ವಲ್ಪ ಕಷ್ಟವೇ. ಆದರೆ ಚೆಂಬ್ರೆ ಮೃದುವಾದ ಹತ್ತಿ ಬಟ್ಟೆಯಾಗಿರುವುದರಿಂದ ಉಡುಗೆಗಳನ್ನು ಆಕರ್ಷಕ ಕಸೂತಿಯಿಂದ ಅಂದಗೊಳಿಸಬಹುದು. ಬಣ್ಣ ಬಣ್ಣದ ದಾರಗಳಿಂದ ಹಾಕಿದ ಕಸೂತಿ ಈ ತಿಳಿ ವರ್ಣದ ಬಟ್ಟೆಯ ಮೇಲೆ ಎದ್ದು ಕಾಣುತ್ತದೆ. ಕುರ್ತಿಯ ಕತ್ತು, ತೋಳಿನ ಮೇಲೆ ಹಾಕಲ್ಪಟ್ಟ ಸರಳವಾದ ಕಸೂತಿ ಚಿತ್ರಗಳು ಎಥ್ನಿಕ್ ನೋಟ ನೀಡುತ್ತವೆ.

ಸ್ಕರ್ಟ್ ಹಾಗೂ ಯುವತಿಯರ ಟಾಪ್‌ನ ಅಂಚಿಗೆ ಸಣ್ಣದಾಗಿ ನೆರಿಗೆಗಳನ್ನು ಕೂಡಾ ಕೊಡಬಹುದು. ಜಾಕೆಟ್, ಶಾರ್ಟ್ಸ್, ಟ್ಯೂನಿಕ್, ಕ್ರಾಪ್ ಟಾಪ್... ಹೀಗೆ ಬಗೆಬಗೆಯ ಉಡುಗೆಗಳು ಯುವತಿಯರಿಗಾದರೆ, ಯುವಕರಿಗೆ ಸಣ್ಣ ಚೌಕುಳಿ ವಿನ್ಯಾಸವಿರುವ ಷರ್ಟ್, ಉದ್ದನೆಯ ಕುರ್ತಾ, ಜಾಕೆಟ್‌ಗಳು ಬಂದಿವೆ. ತಿಳಿ ವರ್ಣದ ಚೆಂಬ್ರೆ ಷರ್ಟ್ ಹಾಗೂ ಕುರ್ತಾವನ್ನು ಜೀನ್ಸ್ ಜೊತೆ ಕೂಡಾ ಹೊಂದಿಸಿಕೊಳ್ಳಬಹುದು.



ಸಾಮಾನ್ಯವಾಗಿ ನೀಲಿ ಅಥವಾ ಇಂಡಿಗೋ ಬಣ್ಣ ಈ ಬಟ್ಟೆಯಲ್ಲಿ ಜನಪ್ರಿಯವಾದರೂ ಬಿಳಿ, ಕೆಂಪು, ಕಂದು ರಂಗಿನ ವಸ್ತ್ರಗಳೂ ಲಭ್ಯ. ಸಾಂಪ್ರದಾಯಕವಾಗಿ ಇದು ಶೇಕಡಾ ನೂರರಷ್ಟು ಹತ್ತಿ ನೂಲಿನಿಂದ ಮಾಡಲ್ಪಡುವುದಾದರೂ ಸ್ಟ್ರೆಚ್, ಲಿನನ್, ಟೆನ್ಸೆಲ್ (ಮರದ ಪಲ್ಪ್‌ನಿಂದ ತಯಾರಾಗುವ ನೂಲು) ಕೂಡಾ ಲಭ್ಯ.

ಈಗೀಗ ಚೆಂಬ್ರೆಯಿಂದ ತಯಾರಾದ ಚಾದರ, ಕೈಚೀಲ, ಪರದೆಗಳಂತ ಉತ್ಪನ್ನಗಳೂ ಸಿಗುತ್ತವೆ.

ಈ ಬಟ್ಟೆಯಿಂದ ಮಾಡಿದ ಉಡುಗೆಗಳ ನಿರ್ವಹಣೆಯೂ ಅಷ್ಟೊಂದು ಕಷ್ಟವಲ್ಲ. ತಣ್ಣೀರಿನಲ್ಲಿ ಸೋಪ್ ಪೌಡರ್‌ನಲ್ಲಿ ನೆನೆಸಿ ಒಗೆದು ಹಾಕಬಹುದು. ಮಷಿನ್‌ನಲ್ಲಿ ಹಾಕಿ ತೊಳೆದರೂ ಬಣ್ಣ ಮಾಸದೇ ಚೆನ್ನಾಗಿ ಬಾಳಿಕೆ ಬರುತ್ತದೆ.

ಇನ್ನು ಈ ಚೆಂಬ್ರೆ ಎಂಬ ಪದ ಕ್ಯಾಂಬ್ರೈನಿಂದ ಬಂದಿದ್ದು. ಫ್ರಾನ್ಸ್‌ನ ಕ್ಯಾಂಬ್ರೈ ಎಂಬ ಪ್ರದೇಶದಲ್ಲಿ ಈ ಹಗುರವಾದ ಲಿನನ್ ಬಟ್ಟೆಯನ್ನು ನೇಯ್ದು ಅದಕ್ಕೆ ಬಣ್ಣ ಹಾಕಿ, ಬ್ಲೀಚ್ ಮಾಡುತ್ತಿದ್ದರಂತೆ. ಕ್ರಮೇಣ ಇದನ್ನು ಹತ್ತಿ ನೂಲಿನಿಂದ ಮಾಡಲಾರಂಭಿಸಿದರು. ■



